ಗರ್ಭಸಂಸ್ಕಾರ ಏಕೆ ಮತ್ತು ಹೇಗೆ?

ಕಳೆದ ಕೆಲವು ದಿನಗಳಿಂದ ದೃಶ್ಯ ಹಾಗೂ ಇತರೆ ಮಾಧ್ಯಮಗಳಲ್ಲಿ ಗರ್ಭಸಂಸ್ಕಾರದ ಬಗ್ಗೆ ಪರ-ವಿರೋಧ ಚರ್ಚೆಗಳು ನಡೆಯುತ್ತಿವೆ. ಕೆಲವರು ಗರ್ಭಸಂಸ್ಕಾರವನ್ನು ಇದು ಅವೈಜ್ಞಾನಿಕ, ಗರ್ಭಸ್ಥ ಶಿಶುವಿಗೆ ಬಾಹ್ಯ ಪ್ರಪಂಚದ ಯಾವುದೇ ವಿಷಯಗಳು ಅರಿವಿಗೆ ಬರಲು ಸಾಧ್ಯವೇ ಇಲ್ಲ, ಪುರಾಣದ ಅಭಿಮನ್ಯು, ಪ್ರಹ್ಲಾದ ಇವೆಲ್ಲವೂ ಕಟ್ಟುಕತೆಗಳು ಎಂದು ವಾದಿಸುತ್ತಲೂ ಇದ್ದಾರೆ. ಹಾಗಾದರೆ ದೇಶದ ಬಹುಪಾಲು ಮಂದಿ ನಂಬಿರುವ ಪುರಾಣ, ಅದರಲ್ಲಿ ಬರುವ ಅಭಿಮನ್ಯು, ಪ್ರಹ್ಲಾದ ಇವರ ಕಥೆಗಳೆಲ್ಲ ಕಪೋಲಕಲ್ಪಿತವೇ? ಎಂಬುದನ್ನು ಚರ್ಚಿಸಲು ತಾನಾಗಿಯೇ ಅವಕಾಶವೊಂದು ಒದಗಿ ಬಂದಿರುವುದಂತೂ ಸತ್ಯ.

ಸತೀಶ ಕೆ.ಎಸ್.
ಪ್ರಾಂತ ಸಂಯೋಜಕ
ಕುಟುಂಬ ಪ್ರಬೋಧನ

ಗರ್ಭಸಂಸ್ಕಾರವೆಂದರೇನು?

ಗರ್ಭಸಂಸ್ಕಾರವೆನ್ನುವುದು ಇತ್ತೀಚಿನ ಯಾವುದೋ ಹೊಸ ಸಂಶೋಧನೆಯಲ್ಲ. ಇದು ಸಾವಿರಾರು ವರ್ಷಗಳಿಂದ, ಋಷಿ ಮೂಲದಿಂದ ಬಂದಂತಹ ಒಂದು ಸಂಸ್ಕಾರ. ಮಾನವನ ಬೆಳವಣಿಗೆಯ ಹಾದಿಯಲ್ಲಿ ಅವನನ್ನು ಕಾಲದಿಂದ ಕಾಲಕ್ಕೆ ಉತ್ತಮನನ್ನಾಗಿಸಲು 16 ರೀತಿಯ ಸಂಸ್ಕಾರಗಳನ್ನು ರೂಪಿಸಿದ್ದರು. ಅದನ್ನೇ ಷೋಡಷ ಸಂಸ್ಕಾರವೆಂದು ಕರೆಯಲಾಗುತ್ತದೆ. ಗರ್ಭ ಧರಿಸುವ ಪೂರ್ವ ಹಾಗೂ ಗರ್ಭ ಧರಿಸಿದ ನಂತರ ದಂಪತಿಗಳು ಅನುಸರಿಸಬೇಕಾದ ಕ್ರಮವೇ ಗರ್ಭಸಂಸ್ಕಾರ. ಉದಾಹರಣೆಗೆ ಮನೆಗೆ ಒಂದು ಸಣ್ಣ ವಸ್ತುವನ್ನು ತರುವಾಗ ಅದರ ತಯಾರಕ ಸಂಸ್ಥೆ, ಅದರ ಬೆಲೆ, ಗುಣಮಟ್ಟ, ಬಾಳಿಕೆ, ಉಪಯೋಗಿಸುತ್ತಿರುವವರ ಅಭಿಪ್ರಾಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಆ ವಸ್ತುವನ್ನು ಮನೆಗೆ ತರಬೇಕೋ ಬೇಡವೋ ನಿರ್ಧರಿಸುತ್ತೇವೆ. ತಂದಂತಹ ಆ ವಸ್ತುವನ್ನು ಉಪಯೋಗಿಸುವುದು ಕೆಲವು ವರ್ಷಗಳು ಮಾತ್ರ ಇನ್ನೂ ಕೆಲವು ತಿಂಗಳುಗಳಿಗೆ ಮಾತ್ರ ಸೀಮಿತ. ಮೂರು ತಿಂಗಳು ಉಪಯೋಗಿಸಿ ಬಿಸಾಡುವ ಒಂದು ಮೊಬೈಲ್ ಫೋನ್ ಬಗ್ಗೆ ಇಷ್ಟೆಲ್ಲಾ ಚಿಂತಿಸಬೇಕಾದರೆ ನಮ್ಮ ಪರಂಪರೆಯ ವಾರಸುದಾರನಾ(ಳಾ)ಗಿ, ನಮ್ಮ ಮನೆತನದ ಪದ್ಧತಿಗಳನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ, ನಮ್ಮ ಸುಖ-ದುಃಖಗಳಲ್ಲಿ ಭಾಗಿಯಾಗುವ, ನಮ್ಮ ಹಿರಿಮೆ-ಗರಿಮೆಗಳನ್ನು